ದಿನಾಂಕಃ **03.12.2024** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣೀಕರಿಸಲಾಯಿತು.

ಪಾಟೀ ಸವಾಲುಃ ಪ್ರತಿವಾದಿ ಪರ ಮಾನ್ಯ ಶ್ರೀಮತಿ. **RNB** ವಕೀಲರಿಂದಃ

ದಾವೆಯನ್ನು ವಾದಿ **5** ನೇ ಪ್ರತಿವಾದಿ ವಿರುದ್ಧ ಹೂಡಿರುತ್ತಾರೆ. ವೆಂಕಟೇಶ್ ಒಬ್ಬರ ವಿರುದ್ಧವೇ ಹೂಡಿರುತ್ತಾರೆ ಎಂದರೆ ಸರಿ. ಮನೆಗೆ ಹೋಗುವ ದಾರಿಗಾಗಿ ಈ ದಾವೆ ಹೂಡಿರುತ್ತಾರೆ. ವಾದಿ ತಮ್ಮ ನಿವೇಶನವನ್ನು ಯಾರ ಬಳಿ ಖರೀದಿ ಮಾಡಿರುತ್ತಾರೆ ಎಂದು ಹೇಳಲು ಆಗುವುದಿಲ್ಲ. ಅದರ ಖಾತೆ ಸಂಖ್ಯೆ ನನಗೆ ತಿಳಿದಿರುವುದಿಲ್ಲ. ವಾದಿಯ ನಿವೇಶನದ ವಿಸ್ತೀರ್ಣ ನನಗೆ ಗೊತ್ತಿಲ್ಲ. ಸದರಿ ನಿವೇಶನದಲ್ಲಿ ವಾದಿಯ ಮಗಳು ಮನೆ ಕಟ್ಟಿರುತ್ತಾರೆ ಎಂದರೆ ಸರಿ. ಸದರಿ ಮನೆಯು ಯಾರ ಹೆಸರಿನಲ್ಲಿ ಇದೆ ಎಂದು ನನಗೆ ಗೊತ್ತಿಲ್ಲ. ವಾದಿಯ ನಿವೇಶನದ ಚಕ್ಕುಬಂದಿ ಪೂರ್ವಕ್ಕೆಃ ರಸ್ತೆ, ಪಶ್ಚಿಮಕ್ಕೆಃ ರಸ್ತೆ, ಉತ್ತರಕ್ಕೆಃ ಖಾಲಿ ಜಾಗ. ನಿವೇಶನದ ನಂತರ ಖಾಲಿ ಜಾಗ ಇರುತ್ತದೆ. ವಾದಿಯ ನಿವೇಶನದ ದಕ್ಷಿಣಕ್ಕೆಃ ಓಡಾಡುವ ದಾರಿ ಇರುತ್ತದೆ ಎಂದರೆ ಸರಿಯಲ್ಲ, ಏನೂ ಇರುವುದಿಲ್ಲ.

ಪೂರ್ವಕ್ಕೆ ಬರುವ ರಸ್ತೆಯ ನಂತರ ಖಾಲಿ ನಿವೇಶನ ಇರುತ್ತದೆ. ಪಶ್ಚಿಮಕ್ಕೆ ಇರುವ ರಸ್ತೆಯಲ್ಲಿ ಓಡಾಡುತ್ತಾರೆ ಎಂದರೆ ಸರಿ, ಆದರೆ ಅಡ್ಡ ಹಾಕಿರುತ್ತಾರೆ. ಪಶ್ಚಿಮಕ್ಕೆ ಇರುವ ರಸ್ತೆ ಸಿಸಿ ರಸ್ತೆ ಎಂದರೆ ಸರಿ. ಸದರಿ ರಸ್ತೆಯಲ್ಲಿ ವಾದಿ ಮತ್ತು ಅವರ ಮಗಳು ಓಡಾಡುತ್ತಾರೆ ಎಂದರೆ ಸರಿ. ವಾದಿಯ ನಿವೇಶನದ ಪೂರ್ವಕ್ಕೆ ಯಾವುದೇ ರಸ್ತೆ ಇಲ್ಲ ಎಂದರೆ ಸರಿಯಲ್ಲ. ವಾದಿಯ ಮನೆಯ ಪೂರ್ವಕ್ಕೆ ಪ್ರತಿವಾದಿಗಳ ಮನೆ ಮತ್ತು ಜಾಗ ಇರುತ್ತದೆ ಎಂದರೆ ಸರಿ. **1** ನೇ ಪ್ರತಿವಾದಿ ತಮ್ಮ ಜಾಗದ ಪಶ್ಚಿಮಕ್ಕೆ ಬಂಡೆ ಕಲ್ಲುಗಳನ್ನು ಹಾಕಿಕೊಂಡಿರುತ್ತಾರೆ ಎಂದರೆ ಸರಿ, ಅಡ್ಡ ಹಾಕಿರುತ್ತಾರೆ. **5** ನೇ ಪ್ರತಿವಾದಿಯ ಮನೆಯ ಉತ್ತರಕ್ಕೆ **1** ರಿಂದ **3** ನೇ ಪ್ರತಿವಾದಿಯ ಶೆಡ್ ಮತ್ತು ಸ್ನಾನದ ಗೃಹ ಇರುತ್ತದೆ ಎಂದರೆ ಸರಿ. ನನಗೆ ಈ ದಾವೆ ವಿಚಾರಗಳು ಏನೂ ತಿಳಿಯದಿದ್ದರೂ ನ್ಯಾಯಾಲಯದ ಮುಂದೆ ಸುಳ್ಳು

ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯ ಜಾಗದ ಪೂರ್ವಕ್ಕೆ ನಾನು ಹೇಳಿದಂತೆ ಯಾವುದೇ ರಸ್ತೆ ಇರುವುದಿಲ್ಲ, ಆದರೂ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನಗೆ ನನ್ನ ಸಾಕ್ಷ್ಯ ಪ್ರಮಾಣ ಪತ್ರದ ವಿಚಾರಗಳು ಗೊತ್ತಿಲ್ಲ ಎಂದರೆ ಸಾಕ್ಷಿಯೂ ನನಗೆ ಓದು ಬರಹ ಬರುವುದಿಲ್ಲ ಎಂದು ನುಡಿಯುತ್ತಾರೆ. ವಾದಿಗೆ ಓಡಾಡಲು ಪಶ್ಚಿಮದ ಕಡೆ ಓಡಾಡಲೂ ದಾರಿ ಇದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಸುಳ್ಳು ದಾವೆ ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

<u>ಮರುವಿಚಾರಣೆ ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖಾನದಂತೆ ಬೆರಳಚ್ಚು ಮಾಡಲಾಗಿದೆ.)

ಓ ಹೇ ಕೇ ಸರಿಯಾಗಿದೆಂದು ಒಪ್ಪಿರುತ್ತಾರೆ.

ಅಧಿಕ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು, ಪಾವಗಡ.

ಸಾಕ್ಷಿ ಸಹಿಃ